ಪೊಲೀಸು ಮುಖ್ಯಸ್ಥನ ವಿವರವೂ ಕಂಡಿತು.

ಬೆರಗು ಬೇಸರ ಎರಡೂ ಆಗಿದ್ದು ಕವಿಗಳ ಮೂಲೆಯಲ್ಲಿ. ಲಂಡನ್ನಿನಲ್ಲಿ ಸಾಯದೆ ಎಲ್ಲೆಲ್ಲೋ ಸತ್ತವರ ಸ್ಮರಣೆ ವಿಗ್ರಹಗಳೂ ಇಲ್ಲಿವೆ. ಶೇಕ್ಸ್‌ಪಿಯರ್ ಮಣ್ಣಾದದ್ದು ಇಲ್ಲಿಗೆ ಸುಮಾರು ಇನ್ನೂರು ಮೈಲು ದೂರದ ಅವನೂರಿನಲ್ಲಿ. ಇಲ್ಲಿ ಅವನ ಸುಂದರ ವಿಗ್ರಹ ಇದೆ. ಜಾಗ ಸಾಕಾಗದೆ ಲಾರೆನ್ಸ್, ಬ್ರೌನಿಂಗ್, ಬೈರನ್, ಎಲಿಯಟ್ ಇಂಥವರ ಹೆಸರ ನೆಲಹಾಸನ್ನು ಲೆಕ್ಕಿಸದೆ ತುಳಿದುಕೊಂಡು ಓಡಾಡುವ ಹೆಜ್ಜೆಗಳನ್ನು ಎಣಿಸಲಾಗದು. ಕಳೆದ ಸುಮಾರು ಮುನ್ನೂರು ವರ್ಷಗಳಲ್ಲಿ ಮುನ್ನೂರು ಜನರು ಈ ಅಬೆಯಲ್ಲಿ ಸಮಾಧಿಗೊಂಡಿದ್ದಾರೆ. ಸ್ಟೀಫನ್ ಹಾಕಿಂಗ್ ಶವ ಕೆಲವು ವರ್ಷದ ಹಿಂದೆ ಇಲ್ಲಿ ಮಣ್ಣಾಗಿದ್ದೇ ಕೊನೆಯದಂತೆ. ನ್ಯೂಟನ್ ಪಕ್ಕದಲ್ಲೇ ಇದ್ದಾನೆ.

ಇದು ಅಬೆ ಆದ್ದರಿಂದ, ಅದೂ ಬೆನೆಡಿಕ್ಟ್ ಪಂಥದ್ದಾದ್ದರಿಂದ ಇಲ್ಲೊಂದು ಸಂನ್ಯಾಸಿಗಳ ಸಮಾಧಿ ಸ್ಥಳವೂ ಇದೆ. ಆ ಪಂಥದ ಸಂನ್ಯಾಸಿಗಳು ಗ್ರಂಥ ರಕ್ಷಣೆಗೆ, ಬರಹಕ್ಕೆ, ಓದಿಗೆ ಪ್ರಾಮುಖ್ಯ ನೀಡಿದವರಾದ್ದರಿಂದ ಅವರಿದ್ದ ಹಳೆಯ ಕಾಲದ ಕೋಣೆ, ಕೆಲಸದ ಜಾಗ, ಅವರ ಸಮಾಧಿ ಎಲ್ಲ ಇವೆ. ಅಲ್ಲಿಗೆ ಹೋಗುವವರು ಕಡಮೆ. ಈ ಪಂಥದವರು ಕಟ್ಟುನಿಟ್ಟಾದ ಆಚರಣೆ, ಕಟ್ಟಲೆಗಳಿಗಿಂತ ಸ್ಥಳೀಯ ಸಮುದಾಯದ ಬದುಕಿನ ಕ್ರಮದಲ್ಲಿ ಬೆರೆತು ಬಾಳುತಿದ್ದರಂತೆ. ಈ ಅಬೆಯ ಎಲ್ಲ ಕಾರಿಡಾರು, ಸಮಾಧಿಸ್ಥಳ, ಕೋಣೆಗಳಲ್ಲೂ ಜನಸಂದಣಿ ಇದ್ದೇ ಇತ್ತು. ಕಿವಿಗೆ ಇಯರ್ ಫೋನು ಸಿಕ್ಕಿಸಿಕೊಂಡು ವಿವರಣೆ ಕೇಳುತ್ತ, ಕೈಯಲ್ಲಿರುವ ವಿಡಿಯೊ ಪ್ಲೇಯರ್‌ನಲ್ಲಿ ಚಿತ್ರ ನೋಡುತ್ತಾ, ಆಗಾಗ ತಲೆ ಎತ್ತಿ ಹೌದೇ ಅನ್ನುವ ಹಾಗೆ ಬೊಂಬೆಯನ್ನೋ ಹೆಸರನ್ನೋ ಶವಪೆಟ್ಟಿಗೆಯನ್ನೋ ನೋಡುತ್ತಾ ಬೇಗ ಬೇಗ ನೋಡಿ ಹೋಗಬೇಕು ಅನ್ನುವ ಧಾವಂತದಲ್ಲಿ ಸಾಗುವ ಜನಕ್ಕೆ, ನನಗೆ ಇಲ್ಲಿ ಏನು ಸಿಕ್ಕಿತೋ?

ಇಷ್ಟಂತೂ ನಿಜ. ಯಾರು ಈ ಮತದ ವ್ಯವಸ್ಥೆಗೆ ಹೊಂದಿಕೊಂಡು ಗಟ್ಟಿಗೊಳಿಸಲು ಕಾರಣರಾದರೋ ಯಾರು ರಾಜ್ಯದ ಅಧಿಕಾರಿಗಳಿಗೆ ಬೇಕಾದವರಾಗಿದ್ದರೋ ಯಾವ ಲೇಖಕರು ಜನದ ಮೇಲೆ ಪ್ರಭಾವ ಬೀರಿ ಆ ಪ್ರಭಾವವನ್ನು ಇಂಗ್ಲಿಷ್ ಆಳರಸರು ಬಳಸಿಕೊಳ್ಳಲು ಆಯಿತೋ ಅವರೆಲ್ಲರ ಸಮಾಧಿಗಳು ಇಲ್ಲಿವೆ. ದಿನವೂ ಇಲ್ಲಿನ ನೆನಪುಗಳನ್ನು ತುಳಿದು ಸಾಗುವ ಸಹಸ್ರ ಜನಕ್ಕೆ ಇಲ್ಲಿರುವ ಕವಿಗಳಾಗಲಿ, ರಾಜ ರಾಣಿ ಮಂತ್ರಿ, ಸೈನಿಕರ ಬದುಕಾಗಲೀ ಟೂರಿಸ್ಟ್ ಆಕರ್ಷಣೆಯ ಭಾಗವಷ್ಟೇ ಇರಬಹುದೋ? ಮುನ್ನೂರು ವರ್ಷದಲ್ಲಿ ಮುನ್ನೂರು ಜನರ ಸಮಾಧಿ ಅಂದರೆ ಇಲ್ಲಿ ಮಣ್ಣಾಗುವ ಮನ್ನಣೆ ಪಡೆದವರಿಗೆಲ್ಲ ಅದು ಹೆಮ್ಮೆಯ ಸಂಗತಿ, ಐಭೋಗ ಎಂದು ಬದುಕಿದವರು ತಿಳಿಯುತ್ತಾರಲ್ಲ ಅದು ಸೋಜಿಗ ಅನಿಸಿತು.

* * *

ನಮ್ಮ ಮನೆಯ ತಾತ ಮುತ್ತಾತಂದಿರ ರಕ್ತ ನನ್ನ ಮೈಯೊಳಗಿದ್ದರೂ ಅವರು ಯಾರನ್ನೂ ಕಂಡ ನೆನಪು ಕೂಡ ನನಗಿಲ್ಲ. ಸಾವನ್ನು ಮಹಾ ಅಂದುಕೊಂಡದ್ದು, ಹುಟ್ಟು ಸಂಭ್ರಮಕ್ಕೆ ಕಾರಣ ಅಂದುಕೊಂಡದ್ದು, ಮರೆಯಬಾರದು ಅನ್ನುವ ಹಟ ತೊಟ್ಟದ್ದು ಎಲ್ಲಾ ಬದುಕಿರುವ ನಮ್ಮದೇ ಚಪಲಗಳಿರಬಹುದು. ಈ ಲೋಕದಲ್ಲಿ ಈಗ ಬದುಕಿ ಇರುವವರಿಗಿಂತ ಸತ್ತವರ ಸಂಖ್ಯೆಯೇ ಅಪಾರವಾಗಿ ಹೆಚ್ಚು. ವ್ಯಾಸಮಹರ್ಷಿ ಒಂದೆಡೆಯಲ್ಲಿ ಹೇಳುತ್ತಾನಲ್ಲಾ—ದಿನ ದಿನವೂ ಜೀವಿಗಳು ಸಾಯುತಿದ್ದರೂ ನಾವು ಸಾಯುವುದಿಲ್ಲ ಎಂದು ಎಲ್ಲರೂ ತಿಳಿದಿರುವುದೇ ದೊಡ್ಡ ಆಶ್ಚರ್ಯ ಅಂತ, ಅದು ಇಲ್ಲಿ ಗಟ್ಟಿಗೊಂಡಿತು.

ನಮ್ಮ ಮನಸಿನ ಕಾಡಿನಲ್ಲಿ ಎಷ್ಟು ಮರಗಳಿದ್ದಾವು ಮಹಾ ಅಂದರೆ? ನಾವು ಎಷ್ಟು ಜನರ ಮನಸಿನಲ್ಲಿ ಉಳಿದೇವು ಮಹಾ ಅಂದರೆ? ಇಲ್ಲಿರುವ ಆಯ್ದ ಮುನ್ನೂರು ಜನರಲ್ಲಿ ಎಷ್ಟು ಜನ ಈಗ ಜನರ ಮನಸಿನಲ್ಲಿ ಉಳಿದಿದ್ದಾರು? ಕೆಲವರು ಹೆಸರು ಮಾತ್ರ. ಅವರ ಹೆಸರಷ್ಟೇ ವಾಸಿ. ಬದುಕಿದ್ದಾಗ ಹೇಗಿದ್ದರೋ ತಿಳಿಯದು. ಆದರೂ ಇವರೆಲ್ಲ ಇದ್ದು ಏನೇನೋ ಮಾಡಿದರಲ್ಲ ಅದಕ್ಕೆ ಅವರು ಮಾಡಿದ್ದು ನಾನು ಬಲ್ಲ ಭಾಷೆಯಲ್ಲಿ ಒಂದಷ್ಟು ಸೇರಿ ಹೋಗಿದ್ದಕ್ಕೆ ನಾನು ಅಲ್ಲಿಗೆ ಹೋಗಿದ್ದೆ, ಬಂದೆ, ಬರೆದೆ, ನೀವು ಓದುತ್ತಿದ್ದೀರಿ. ಹೀಗಾಗುತ್ತಿದೆ ಇದು ಅನ್ನುವುದು ಅಲ್ಲಿರುವ ಯಾರಿಗೂ ಊಹೆ ಕೂಡ ಮಾಡಲಾಗಿರದ ಸತ್ಯ. ಅವರು ಏನು ಮಾಡಿದ್ದರಿಂದ ಇವತ್ತು ನಾವೆಲ್ಲ ಹೀಗಿದ್ದೇವೆ ಅನ್ನುವುದು ಪೂರ್ತಿಯಾಗಿ ತಿಳಿಯಲಾಗದ ನಿಗೂಢ. ಅಬೆ ಒಂದು ಸ್ಮರಣೆ. ಆ ನೆನಪೂ ಕಾಲ ಕಳೆಯುತ್ತ ಮರೆತು ಹೋಗುತ್ತದೆ ಅನಿಸಿದೆ. ●